ಪಿಡಬ್ಲ್ಯೂ -1 ಓ.ಎಸ್.ನಂ.363/2021

ದಿನಾಂಕಃ 11-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಕೆ ವಿ ಎಸ್ ವಕೀಲರಿಂದ

ನನ್ನ ಜನ್ಮ ದಿನಾಂಕ 23-09-1976. ಪ್ರತಿವಾದಿ ಸುಭಾಷ್ ನನ್ನ ಅಣ್ಣ. ನನ್ನ ಅಣ್ಣನ ಜನ್ಮ ದಿನಾಂಕ ದಿಃ07-09-1974. 1992 ರಲ್ಲಿ ನಾನು ಎಸ್ ಎಸ್ ಎಲ್ ಸಿ ಮುಗಿಸಿರುತ್ತೇನೆ. 1994 ರಲ್ಲಿ ಪಿಯು ಸಿ ವಿದ್ಯಾಭ್ಯಾಸವನ್ನು ತೊಟ್ಟಿ ಗ್ರಾಮದಲ್ಲಿ ಮುಗಿಸಿರುತ್ತೇನೆ. 1997 ರಲ್ಲಿ ನಾನು ಚಿಂತಾಮಣಿಯಲ್ಲಿ ಪದವಿ ಶಿಕ್ಷಣ ಮುಗಿಸಿರುತ್ತೇನೆ. 1999 ರಲ್ಲಿ ಎಂ ಎಸ್ಸಿ ಅಯನ್ನು ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಪಾಸ್ ಮಾಡಿರುತ್ತೇನೆ. 2014 ರಲ್ಲಿ ಯು ಎಸ್ ಎ ಯಿಂದ ನಾನು ಪ ಹೆಚ್ ಡಿ ಮುಗಿಸಿರುತ್ತೇನೆ. ಪಿ ಹೆಚ್ ಡಿ ಮಾಡಬೇಕಾದರೆ 2008 ರಿಂದ 2014 ರವರೆಗೆ ನಾನು ಯು ಎಸ್ ಎ ನಲ್ಲಿ ವಾಸವಾಗಿರುತ್ತೇನೆ. ನೀವು ಯು ಎಸ್ ಎ ಯಲ್ಲಿ ಪಿ ಹೆಚ್ ಡಿ ಮಾಡುವಾಗ ನಿಮ್ಮ ತಂದೆಯ ಮೇಲೆ ಅವಲಂಬಿತಾಗಿದ್ದೀರಿ ಎಂದರೆ ಸರಿಯಲ್ಲ ನನಗೆ ಸ್ಕಾಲರ್ಶಿಪ್ ಬರುತ್ತಿದ್ದು ಅಷ್ಟರಲ್ಲಿ ನನಗೆ ಮದುವೆಯಾಗಿದ್ದು ನನ್ನ ಗಂಡ ಉತ್ತೇಜನ ನೀಡಿರುತ್ತಾರೆ. ನನಗೆ ಎಷ್ಟು ಸ್ಕಾಲರ್ ಶಿಫ್ ಬರುತ್ತಿತ್ತು ಎಂದರೆ 1200 ಡಾಲರ್ ಬರುತ್ತಿದ್ದು ನ್ಯಾಯಾಲಯಕ್ಕೆ ದಾಖಲೆ ನೀಡಿರುವುದಿಲ್ಲ. ಎಂ ಎಸ್ ಸಿ ಮಾಡುವವರೆಗೂ ಹಾಗೂ ಮದುವೆಯಾಗುವವರೆಗೂ ನನ್ನ ತಂದೆ ಮೇಲೆ ಅವಲಂಬಿತಳಾಗಿರುತ್ತೇನೆ. 2002 ರಲ್ಲಿ ಮದುವೆಯಾಗಿರುತ್ತದೆ. ಮದುವೆಯಾದ ನಂತರ ನಿಮ್ಮ ಗಂಡನ ಮನೆಯಲ್ಲಿ ವಾಸವಾಗಿದ್ದೀರಿ ಎಂದರೆ ಹೌದು. 2002 ರಿಂದ 2008 ರವರೆಗೆ ನಾನು ಬೆಂಗಳೂರಿನಲ್ಲಿ ಬಿಟ್ಟು ಬಿಟ್ಟು ಕೆಲಸ ಮಾಡುತ್ತಿದ್ದೆ. 2002 ರಿಂದ 2008 ರವರೆಗೆ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲ. ಮುನಿಶಾಮಿ ನನ್ನ ತಂದೆ ಲೀಲಾವತಿ ನನ್ನ ತಾಯಿ. ನನ್ನ ತಂದೆಯ ಸಂಪಾಧನೆಯೇ ನನ್ನ ತಾಯಿಯ ಸಂಪಾಧನೆಯಾಗಿತ್ತು. ನನ್ನ ತಾಯಿ ಗೃಹಿಣಿ.

ಶ್ರೀನಿವಾಸಪುರ ತಾಲ್ಲೂಕು ಕೊಲ್ಲೂರು ಗ್ರಾಮದಲ್ಲಿ ನನ್ನ ತಂದೆಯವರು ಹುಟ್ಟಿರುತ್ತಾರೆ. ನಮ್ಮ ತಂದೆಗೆ 4 ಜನ ಅಣ್ಣ ತಮ್ಮಂದಿರು ಒಬ್ಬ ಅಕ್ಕ ಇರುತ್ತಾರೆ. ಆ ಕುಟುಂಬ ಶ್ರೀಮಂತಾಗಿದ್ದು ಆಸ್ತಿಗಳು ಜಾಸ್ತಿ ಇದ್ದವು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹುಟ್ಟಿದಾಗಿನಿಂದ ಇದುವರೆಗೂ ನನ್ನ ಅಜ್ಜಿ ಮನೆಗೆ ಹೋಗಿ ಬರುತ್ತೇನೆ. ಕೊಲ್ಲೂರು ಗ್ರಾಮದಲ್ಲಿ ಇರುವ ಆಸ್ತಿಯ ಬಗ್ಗೆ ನನ್ನ ತಂದೆ ದಾನ ಪತ್ರ ಬರೆದುಕೊಟ್ಟಿರುವುದಿಲ್ಲ. ನನ್ನ ತಂದೆ ತಾಯಿಯನ್ನು ಯಾರೂ ನೋಡಿಕೊಳ್ಳುತ್ತಿತರುವುದಿಲ್ಲ. ಈಗ ನೀವು ಬೆಂಗಳೂರಿನಲ್ಲಿ ವಾಸ ಇರುವುದು ಎಂದರೆ ಸರಿ. ನಿಮ್ಮ ತಂದೆ ಚಿಂತಾಮಣಿ ಯಲ್ಲಿ ವಾಸ ಇದ್ದಾರೆ ಇಲ್ಲ. ಈಗ ಆಲಂಬಗಿರಿ ಗ್ರಾಮದಲ್ಲಿ ಇರುವ ತೋಟದಲ್ಲಿ ಇದ್ದಾರೆ. ಅವರ ಊಟ ವಸತಿಯನ್ನು ಮನೆ ಕೆಲಸದವರು ಮತ್ತು ಕೂಲಿಯವರು ನೋಡುತ್ತಾರೆ. ನನ್ನ ತಂದೆಗೆ 80 ವರ್ಷ ವಯಸ್ಸಾಗಿರುತ್ತದೆ. ನಮ್ಮ ತಂದೆಗೆ ಸಕ್ಕರೆ ಖಾಯಿಲೆ ಇದ್ದು ಬೇರೆ ಯಾವುದೇ ಖಾಯಿಲೆ ಇರುವುದಿಲ್ಲ. ನಿಮ್ಮ ತಂದೆ ಮೂಲತಃ ಮುಂಗೋಪಿ ಸ್ವಭಾವದವರು ಎಂದರೆ ಮುಂಗೋಪಿ, ತುಂಬಾ ಶಿಸ್ತಿನ ಮನುಷ್ಯ. ಕೊಳ್ಳೂರಿನಲ್ಲಿ ಇರುವ ಆಸ್ತಿಗಳಲ್ಲಿ ಅವರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತಾರೆ. ಎಷ್ಟು ಆಸ್ತಿಗಳು ನಿಮ್ಮ ತಂದೆಗೆ ಬಂದಿರುತ್ತದೆ ಎಂದರೆ ಎರಡು ಎಕರೆ ಬಂದಿರಬಹುದು ಆದರೆ ಖಚಿತ ಮಾಹಿತಿ ಇಲ್ಲ. ಎರಡು ಎಕರೆ ಬಂದು ಎಷ್ಟು ವರ್ಷ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಎರಡು ಎಕರೆ ಜಮೀನಿನಲ್ಲಿ ಮಾವಿನ ತೋಪು ಇರಬಹುದು. ಮಾವಿನ ತೋಪಿನಲ್ಲಿ ಎಷ್ಟು ಬೆಳೆ ತೆಗೆಯುತ್ತೀರಿ ಎಂದು ಮಾಹಿತಿ ಇಲ್ಲ. ಆದಾಯ ಇದೆ ಎಂದರೆ ನನಗೆ ಖಚಿತ ಮಾಹಿತಿ ಇಲ್ಲ ಗೊತ್ತಿಲ್ಲ.

ನಿಮ್ಮ ತಂದೆಯವರು ರಾಸಾಯನಿಕ ವಿಭಾಗದ ಉಪನ್ಯಾಸಕರಾಗಿದ್ದು ನಿಮಗೆ ಮತ್ತು ನಿಮ್ಮ ಅಣ್ಣನಿಗೆ ಒಳ್ಳೆಯ ಶಾಲೆಯಲ್ಲಿ ವಿದ್ಯಾಭಾಸ ನೀಡಿದ್ದರು ಎಂದರೆ ಸರಿ. ಆ ಸಂಧರ್ಭದಲ್ಲಿ ನಿಮ್ಮ ತಂದೆ ಒಬ್ಬರೇ ದುಡಿಮೆ ಮಾಡುತ್ತಿದ್ದರು ಎಂದರೆ ಸರಿ. ನೀವು ನ್ಯಾಯಾಲಯಕ್ಕೆ ಹಾಕಿರುವ ಎಲ್ಲಾ ದಾಖಲೆಗಳಲ್ಲಿ ನಿಮ್ಮ ಅಣ್ಣನ ಬಗ್ಗೆ ಉಲ್ಲೇಖ ಇದೆಯಾ ಎಂದರೆ ನಾನು ಗಮನಿಸಿರುವುದಿಲ್ಲ. ನಿಮ್ಮ ತಂದೆಯವರಿಗೆ ನಿಮ್ಮ ಅಣ್ಣನಿಗೆ ಮೋಸ ಮಾಡಬಾರದೆಂಬ ಉದ್ದೇಶದಿಂದ ನಿಮಗೆ ದಾನ ಪತ್ರ ಮಾಡಿದ್ದಾರಾ ಎಂದರೆ

ಮೋಸ ಮಾಡುವ ಉದ್ದೇಶ ಇರಲಿಲ್ಲ. ನನ್ನತಾಯಿ 10 ನೇ ತರಗತಿ ವರೆಗೆ ಓದಿರುತ್ತಾರೆ. ಕೋಶಟ್ ಕಛೇರಿ ಎಲ್ಲಾ ವಿಷಯಗಳನ್ನು ನನ್ನ ತಂದೆ ನೋಡಿಕೊಳ್ಳುವುದು ಎಂದರೆ ಸರಿ. 2019 ರಲ್ಲಿ ನನ್ನ ತಾಯಿ ಮೃತಪಟ್ಟಿರುತ್ತಾರೆ. ನಿಮ್ಮ ತಾಯಿ ತೀರಿಕೊಂಡ 15 ದಿನಗಳ ಒಳಗೆ ನಿಮಗೆ ದಾನ ಪತ್ರ ಬರೆದುಕೊಟ್ಟಿರುತ್ತಾರಾ ಎಂದರೆ ಬರೆದುಕೊಟ್ಟಿರುತ್ತಾರೆ. ದಾನ ಷತ್ರದಲ್ಲಿ ನಿಮ್ಮ ಅಣ್ಣ ನನ್ನ ಒಪ್ಪಿಗೆ ಇದೆ ಅಂತ ಹೇಳಿ ಉಲ್ಲೆಖ ಇದೆಯಾ ಎಂದರೆ ಇಲ್ಲ. ದಾನ ಪತ್ರ ಮಾಡುವುದಕ್ಕೆ ನನ್ನ ಅಣ್ಣ ಯಾವುದೇ ಒಪ್ಪಿಗೆ ಕೊಟ್ಟಿರುವುದಿಲ್ಲ. ನೀವು ನಿಮ್ಮ ತಂದೆ ತಾಯಿಯಿಂದ ಏನೇನು ಪತ್ರಗಳನ್ನು ಪಡೆದುಕೊಂಡಿರುತ್ತೀರೋ ಅವು ಎಲ್ಲಾ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಪಡೆದುಕೊಂಡಿರುತ್ತೀರಿ ಎಂದರೆ ಸುಳ್ಳು ನೀವು ಮತ್ತು ನಿಮ್ಮ ಗಂಡ ಅಪ್ರಾಮಾಣೀಕತೆಯ ಲಾಭ ತೋರಿ ನಿಮ್ಮ ತಂದೆ ತಾಯಿಗೆ ಪ್ರತಿವಾದಿ ಬಗ್ಗೆ ಸುಳ್ಳು ನಿರೂಪಣೆ ಮಾಡಿ ಅಕ್ರಮವಾಗಿ ದಾವಾ ಸ್ವತ್ತುಗಳನ್ನು ಪಡೆದುಕೊಂಡಿರುತ್ತೀರಿ ಎಂದರೆ ಸುಳ್ಳು ನಿಮ್ಮ ಕುಟುಂಬಕ್ಕೆ ಹೋಲಿಸಿದರೆ ಪ್ರತಿವಾದಿಯ ಕುಟುಂಬ ಸ್ವಲ್ಪ ಬಡತನದಲ್ಲಿ ಇದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ನಿಮ್ಮ ತಂದೆ ಮೊದಲ ಬಾರಿಗೆ ಯಾವ ಆಸ್ತಿಯನ್ನು ಯಾವ ದಿನಾಂಕ ಖರೀದಿ ಮಾಡಿದರು ಎಂದರೆ 1992 ರಲ್ಲಿ ಆಲಂಬಗಿರಿಯಲ್ಲಿ ಆಸ್ತಿಯನ್ನು ನಮ್ಮ ತಾಯಿ ಹೆಸರಿಗೆ ಖರೀದಿ ಮಾಡಿರುತ್ತಾರೆ. ಅದರ ಪ್ರತಿಫಲದ ಹಣವನ್ನು ನಿಮ್ಮ ತಂದೆಯವರು ಕೊಟ್ಟಿರುತ್ತಾರೆ ಎಂದರೆ ಸರಿ. ಆ ಆಸ್ತಿಯನ್ನು ಖರೀದಿ ಮಾಡಲು ಕೊಡುವಷ್ಟು ಹಣ ನಿಮ್ಮ ತಂದೆ ಬಳಿ ಇತ್ತು ಎಂದು ದಾಖಲೆ ಕೊಡಲಾಗುತ್ತದಾ ಎಂದರೆ ಕೊಟ್ಟಿರುವುದಿಲ್ಲ ಬೇಕಾದರೆ ಕೊಡುತ್ತೇನೆ. ನಿಪಿ-1 ರಿಂದ 10 ಆಗುವ ಮೊದಲು ನೀವು ನಿಮ್ಮ ತಂದೆ ತಾಯಿ ನಿಮ್ಮ ಅಣ್ಣ ಎಲ್ಲರೂ ಚಿಂತಾಮಣಿಯ ಅಂಜನಿ ಬಡಾವಣೆಯಲ್ಲಿ ವಾಸ ಇದ್ದೀರಿ ಎಂದರೆ ನಾನು 2004 ರವರೆಗೆ ವಾಸ ವಾಗಿರುತ್ತೇವೆ. 2004 ರ ನಂತರ ನನ್ನ ಅಣ್ಣ ಬೆಂಗಳುಾರಿನಲ್ಲಿ ವಾಸವಾಗಿರುತ್ತಾರೆ. ಇಲ್ಲಿ ಕೆಲಸ ಸರಿ ಇಲ್ಲದ ಕಾರಣ ಕೆಲಸಕ್ಕಾಗಿ ಬೆಂಗಳೂರಿಗೆ ಹೋಗಿರುತ್ತಾರೆ. ನಿಮ್ಮ ತಂದೆಗೆ ಶಿಕ್ಷಣವನ್ನು ಕೊಡಿಸಿದ್ದು ಯಾರು ಎಂದರೆ ಅವರ ತಂದೆ ತಾಯಿ. ನಿಮ್ಮ ತಂದೆಯವರ ವಿದ್ಯಾಭ್ಯಾಸ ಆಗುವವರೆಗೂ ನಿಮ್ಮ ತಾತ ಬದುಕಿದ್ದರಾ ಎಂದರೆ ಅದರ ಬಗ್ಗೆ ಖಚಿತ ಮಾಹಿತಿ ಇಲ್ಲ. ನಿಮ್ಮ ತಾತ

ತೀರಿಕೊಂಡಿದ್ದರಿಂದ ನಿಮ್ಮ ತಂದೆಯ ಅಣ್ಣ ತಮ್ಮಂದಿರು ವಿದ್ಯಾಭ್ಯಾಸದ ಖರ್ಚ ಮಾಡಿರುತ್ತಾರೆ ಎಂದರೆ ಇರಬಹುದು ನನಗೆ ಮಾಹಿತಿ ಇಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.